**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS-180/2023** **PW-1**

**ದಿಃ 06.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಂ ಸಿ ವಕೀಲರಿಂದಃ**

**1.** ಚನ್ನಮಲ್ಲಪ್ಪ ತಮ್ಮ ದೊಡ್ಡಪ್ಪ ಎಂದರೆ ಸರಿ. ಅವರ ಮಗಳ ವಿಶ್ವನಾಥ ಎಂದರೆ ಸರಿ. 2001-02 ನೇ ಸಾಲಿನಲ್ಲಿ ಸಿಟಿಎಸ್ ನಂಃ 2670 ಮತ್ತು 2672 ರ ಮೌಲ್ಯವು ಎಷ್ಟು ಇತ್ತು ಎಂದರೆ ಗೊತ್ತಿಲ್ಲ. ದಿನಾಂಕ ಃ 27.04.2001 ರಲ್ಲಿ ಸಿಟಿಎಸ್ ನಂ.2670 ವನ್ನು ಈರಣ್ಣ ಮುಳಮುತ್ತಲ ರವರು ಚನ್ನಮಲ್ಲಪ್ಪ ರವರಿಗೆ ಬಿಟ್ಟುಕೊಟ್ಟಿರುತ್ತಾರೆಂದರೆ ಸಾಕ್ಷಿಯು ಅದರ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೇ. ಅದೇ ದಿನ ಸಿಟಿಎಸ್ ನಂಃ 2672 ಗೆ ಸಂಬಂದಿಸಿದಂತೆ ಚನ್ನಮಲ್ಲಪ್ಪನ ಮಗನಾದ ವಿಶ್ವನಾಥ ರವರು ತಮಗೆ ಹಕ್ಕು ಬಿಟ್ಟುಕೊಟ್ಟಿರುತ್ತಾರೆಂದರೆ ಸರಿ. ಅಬಿಷೇಕ ಫಾರ್ಮಾಗೆ ತಾವು ಮಾಲೀಕರು ಎಂದರೆ ಸರಿ. ಸದರಿ ಅಬಿಷೇಕ ಪಾರ್ಮಾಗೆ ಸಂಬಂದಿಸಿದಂತೆ ತಾವು ಮತ್ತು ತಮ್ಮ ತಂದೆಯವರು ಸಾಲದ ಹಣದ ಪಾವತಿ ಮಾಡಿಲಲ ಎಂದು ಹೇಳಿ ಸಾರ್ವಜನಿಕ ಸ್ವಾದೀನ ನೋಟೀಸನ್ನು ಕೊಟ್ಟಿರುತ್ತಾರೆಂದರೆ ಸರಿ. ಸಾಕ್ಷಿಯು ಸದರಿ ಸ್ವಾದೀನ ನೋಟಿಸಿನ ಪತ್ರಿಕಾ ಪ್ರಕಟಣೆಯನ್ನು ಒಪ್ಪಿಕೊಂಡಿದ್ದು ಸದರಿ ದಾಖಲೆಯು ದೃಡೀಕೃತ ಪ್ರತಿಯಾಗಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂದಿಸಿದಂತೆ ಕರ್ನಾಟಕ ಬ್ಯಾಂಕನವರು ಶಂಕರಸಾ ಪಟ್ಟಣ ಮತ್ತು ವಾಸುದಾಸಸಾ ಪಟ್ಟಣ ರವರ ಹೆಸರಿಗೆ ಸೇಲ್ ಸರ್ಟಿಪಿಕೇಟನ್ನು ಮಾಡಿಕೊಟ್ಟಿರುತ್ತಾರೆಂದರೆ ಸರಿ. ಅದನ್ನು ಇಲ್ಲಿಯವರೆಗೂ ತಾವು ಪ್ರಶ್ನಿಸಿಲ್ಲ ಎಂದರೆ ಸರಿ.

2. ಆರ್ ಎ ನಂಬರ ಃ 285/2015 ರಲ್ಲಿ ತಮ್ಮ ನಡುವೆ ರಾಜೀ ಪತ್ರಯಾಗಿದೆ ಎಂದರೆ ಸಾಕ್ಷಿಯು ಮಾಹಿತಿ ಇಲ್ಲ ಎನ್ನುತ್ತಾರೆ. ಆ ರಾಜೀ ಪತ್ರದ ಪ್ರಕಾರ ತಾವೆಲ್ಲರೂ ಸೇರಿ

3 ನೇ ಪ್ರತಿವಾದಿಗೆ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನನ್ನ ಭಾಗವನ್ನು ಬಿಟ್ಟುಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಈಗಲೂ 3 ನೇ ಪ್ರತಿವಾದಿಯ ಹೆಸರಿನಲ್ಲಿ ಉತಾರವು ಬರುತ್ತಿದೆ ಎಂದರೆ ಸಾಕ್ಷಿಯು ನನ್ನ ತಂದೆ ತಾಯಿ ಅಲ್ಲಿ ವಾಸವಾಗಿರುತ್ತಾರೆಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ವಾಸವಾಗಿದ್ದರೂ ಈಗ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.